192

ಮೈಸೂರ ಗೆಜೆಟ್.

ಸಂ. 42.] ಸರಕಾರದಿಂದ ಪ್ರಕಾಶ ಆದ್ದು. [ನಂ. 5.

ಬೆಂಗಳೂರು, ಗುರುವಾರ, ಜನವರಿ ತಾ॥ 31, ಸನ್ 1907.

III ನೆ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.
ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವ್ ಇಲಾಖೆ.

ತಾರೀಖು 10ನೆ ಜನವರಿ 1907.

ನಂ. ಜೆ. 1977-ಲೆಜಿಸ. 23-06—2. 1901ನೆ ಇಸವಿಯ 2ನೆ ನಂಬರ್ ಮೈಸೂರು ಸೀಮೆಯ ಬೇಟೆ ವ್ಯಗಗಳ ಮತ್ತು ಮಿಾನಿನ ರಕ್ಷಣೆಯ ರೆಗ್ಯುಲೇಷನಿನಿಂದ ಕೊಡಲ್ಪಟ್ಟ ಅಧಿಕಾರವನ್ನು ಚಲಾಯಿಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, 1905ನೆ ಇಸವಿಯ ಮಾರ್ಚಿ 7ನೆ ತಾರೀಖಿನ ಜೆ. 2542-ಲೆಜಿಸ. 23—7ನೆ ನಂಬರಿನ ಇಸ್ತಿಹಾರ್‌ನಿಂದ ತಿದ್ದುಪಾಟು ಮಾಡಲ್ಪಟ್ಟ 1901ನೆ ಇಸವಿಯ ಡಿಸೆಂಬರ್ 11ನೆ ತಾರೀಖಿನ 9007-ಲೆಜಿಸ. 56ನೆ ನಂಬರಿನ ಇಸ್ತಿಹಾರ್‌ನಾಮೆಯ ಮೇರೆಗೆ ಪ್ರಕಟಿಸಲ್ಪಟ್ಟ ನಿಬಂಧನೆಗಳಿಗೆ 3ನೆ ನಿಬಂಧನೆಗೆ ಬದಲಾಗಿ ಈ ಕೆಳಗಣ ನಿಬಂಧನೆಯನ್ನು ಸೇರಿಸತಕ್ಕದ್ದೆಂದು ಹುಕುಂ ದಯಪಾಲಿಸಿರುತ್ತಾರೆ.

"3. (1) 1908ನೆ ಇಸವಿಯ ಜೂನ್ 15ನೆ ತಾರೀಖಿಗೆ ಮುಗಿಯುವ ಮುಂಜಿನ ಇನ್ನೊಂದು ಅವಧಿಯ ವರೆಗೆ, ಕಾಂತಿಯುಕ್ತವಾದ ಬಣ್ಣದ ಗರಿಗಳುಳ್ಳ ಪಕ್ಷಿಗಳನ್ನೂ ನವಿಲುಗಳನ್ನೂ ಮತ್ತು (ಈ ನಿಬಂಧನೆಯ 2ನೆ ಕಲಮಿನಲ್ಲಿ ನಿಯಮಿಸಿದ ಮೇರೆಗೆ ಏನಾ) ಜಿಂಕೆಗಳನ್ನೂ ಕೊಲ್ಲುವುದಾಗಲಿ ಹಿಡಿಯುವುದಾಗಲಿ ನಿಷೇಧಿಸಲ್ಪಟ್ಟಿದೆ.

"(2) ಈ ನಿಬಂಧನೆಗಳ ಮೇರೆಗೆ ಬೇಟೆ ಲೈಸೆನ್ಸು ಪಡೆದಿರುವವನು ಅರ್ಜಿ ಕೊಟ್ಟರೆ, ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರು, ಅಂಥಾ ಲೈಸೆನ್ಸುದಾರನಿಗೆ, ಸದರಿ ಲೈಸೆನ್ಸು ಯಾವ ವರ್ಷಕ್ಕೋಸ್ಕರ ಕೊಡಲ್ಪಟ್ಟಿದೆಯೋ ಆ ವರ್ಷದ ಒಳಗಾಗಿ, ಕೃಷ್ಣಮೃಗವಾದರೆ 15 ಅಂಗುಲಗಳಿಗಿಂತ ಕಮ್ಮಿಯಿಲ್ಲದ, ಮತ್ತು ಕೊಂಬಿಗುರಿಯಾದರೆ 5 ಅಂಗುಲಗಳಿಗಿಂತ ಕಮ್ಮಿಯಿಲ್ಲದ ಪ್ರಮಾಣದ ಕೊಂಬುಗಳುಳ್ಳ, ಒಟ್ಟು ಎರಡಕ್ಕಿಂತ ಹೆಚ್ಚಾಗದ ಜಿಂಕೆಗಳನ್ನು ಕೊಲ್ಲುವುದಕ್ಕೆ ಹುಕುಂ ಕೊಡಬಹುದು. ಲೈಸೆನ್ಸುದಾರನು ತಾನು ಕೊಂದ ಜಿಂಕೆಗಳ ವಿಷಯವಾಗಿ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಗೆ ನಿಷ್ಕರ್ಷಣವಾಗಿ ಸಾಕ್ಷಿಕಾಶ ಮಾಡಿದ ಬಂದು ರಿಪೋರ್ಟನ್ನು ಕೊಡಬೇಕು."

ಆಜ್ಞೆಯ ಮೇರೆಗೆ,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸೆಕ್ರಿಟರಿ.